# 13

# ಅಂತಿಮವಾದ ಭವಿಷ್ಯ

## (ಪ್ರಕಟನೆ 21 ಮತ್ತು 22)

ಸಮಯ ಹಾಗೂ ಸೃಷ್ಟಿಯ ಆರಂಭದ ಕುರಿತ ಅಧ್ಯಯನವನ್ನು ಆದಿಕಾಲದಿಂದ ಗಮನಿಸಿರುವೆವು. "ಬಳಿಕ ದೇವರು - ಆಕಾಶ ಮಂಡಲದಲ್ಲಿ ಬೆಳಕುಗಳು ಉಂಟಾಗಲಿ; ಅವು ಹಗಲಿರುಳುಗಳನ್ನು ಬೇರೆ ಬೇರೆ ಮಾಡಲಿ; ಇದಲ್ಲದೆ ಅವು ಗುರುತುಗಳಾಗಿದ್ದು ಸಮಯಗಳನ್ನು ದಿನ ಸಂವತ್ಸರಗಳನ್ನೂ ತೋರಿಸಲಿ" (ಆದಿಕಾಂಡ 1:14). ಬೈಬಲಿನ ಪ್ರಕಾರ, ಸಮಯಕ್ಕೆ ಒಂದು ಆರಂಭವಿತ್ತು, ಸತ್ಯವೇದದ ಪ್ರಕಾರ, ಅದಕ್ಕೆ ಒಂದು ಅಂತ್ಯವೂ ಸಹ ಇರುತ್ತದೆ. ಇತರ ಧರ್ಮಗಳಲ್ಲಿ ಇರದಂತೆ, ಸತ್ಯವೇದವು ಸಮಯವನ್ನು ನೇರವಾಗಿದೆ ಎಂದು ಪ್ರತಿಬಿಂಬಿಸುತ್ತದೆ, ಅದಕ್ಕೆ ಒಂದು ಅಂತ್ಯವಿದೆ ಎಂದು ಹೇಳುತ್ತದೆ. ಅದು ವೃತ್ತಾಕಾರದಲ್ಲಿರದೆ, ಅಂದರೆ ಪುನಃ ಹಿಂದಿರುಗುವದಿಲ್ಲ. ಸತ್ಯವೇದದ ಬರಹಗಾರರನ್ನು ಈ ಲೋಕದವರು "ದರ್ಶನಕಾರರು" ಎಂದಿರುವರು. ಸಮಯವು ಅಂತ್ಯಗೊಳ್ಳುವದು ಮಾತ್ರವಲ್ಲದೆ, ಅದು ಘೋರವಾಗಿ ಅಂತ್ಯಗೊಳ್ಳುತ್ತದೆ.

ಯೇಸು ಬರುವಾಗ ಆ ಕ್ಷಣವು ಅಂತ್ಯಗೊಳ್ಳುತ್ತದೆ. ದೈಹೀಕವಾಗಿ ಕಾಣುವ ಲೋಕವು ನಾಶವಾಗಿ, ಹೊಸ ನಿತ್ಯತ್ವವು ಆರಂಭಗೊಳ್ಳುತ್ತದೆ. 2 ಪೇತ್ರ 3:3-10 ರಲ್ಲಿ, ಸಂದೇಹ ಪಟ್ಟ ಕೆಲವರೊಂದಿಗೆ ಪೇತ್ರನು ಮಾತನಾಡಿ, "ನಮ್ಮ ಪಿತೃಗಳು ನಿದ್ರೆ ಹೊಂದಿದ ದಿನ ಮೊದಲುಗೊಂಡ ಸಮಸ್ತವೂ ಲೋಕಾದಿಯಿಂದಿದ್ದ ಹಾಗೆಯೇ ಇರುತ್ತದಲ್ಲಾ" (ವಚನ 4) ಅಂದನು. ಅಂತ್ಯ ಉಂಟಾಗುತ್ತದೆ ಎಂಬುದಕ್ಕೆ ಯಾವ ಸೂಚನೆಯು ಇನ್ನೂ ಇರುವದಿಲ್ಲ ಎಂಬ ಅರ್ಥವಾಗಿದೆ. ಈಗಾಗಲೇ ದೇವರು ತಾನು ಉಂಟುಮಾಡಿದ್ದ ಲೋಕವನ್ನು ನಾಶಮಾಡಿದ್ದನು ಎಂದು ಪೇತ್ರನು ತಿಳಿಸಿದ್ದನು, ಅದು ಪ್ರಳಯದಿಂದ ನಾಶವಾಗಿತ್ತು (ಆದಿಕಾಂಡ 6; 7). ಹಾಗೆಯೇ ಆತನು ಪುನ ನಾಶಮಾಡಲೂ ಬಹುದು - ಈ ಸಮಯದಲ್ಲಿ ಅದು ಬೆಂಕಿಯಿಂದ ನಾಶವಾಗುತ್ತದೆ. ನಂತರ ಅವನು ತನ್ನ "ಕೇಳುಗರಿಗೆ" ಕರ್ತನು ತನ್ನ ವಾಗ್ದಾನವನ್ನು ನೆರವೇರಿ ಸುವದಕ್ಕೆ ತಡಮಾಡುತ್ತಾನೆಂಬುದಾಗಿ ಕೆಲವರು ಅರ್ಥಮಾಡಿಕೊಳ್ಳುವ ಹಾಗೆ ಆತನು ತಡಮಾಡುವವನಲ್ಲಾ (ವಚನ 9). ದೇವರಿಗೆ ಸಮಯದ ಅಗತ್ಯವಿಲ್ಲ; ದೇವರು ಅದರ ಆಡಳಿತಕ್ಕೆ ಒಳಪಡುವದೂ ಇಲ್ಲ. ನಂತರ ಪೇತ್ರನು ಹೇಳಿಕೆಯನ್ನು ನೀಡಿ: "ಆದರೂ ಕರ್ತನ ದಿನವು ಕಳ್ಳನು ಬರುವಂತೆ ಬರುತ್ತದೆ. ಆ ದಿನದಲ್ಲಿ ಆಕಾಶಮಂಡಲವು ಮಹಾಘೋಷ ದಿಂದ ಇಲ್ಲದೆ ಹೋಗುವದು. ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಲಯವಾಗಿ ಹೋಗುವವು. ಭೂಮಿಯೂ ಅದರಲ್ಲಿರುವ ಕೆಲಸಗಳೂ ಸುಟ್ಟು ಹೋಗುವವು" (3:10). ಹೌದು ಅಂತ್ಯ ಸಮಯವೂ ಬರಲಿದೆ.

ಯೇಸು ಈ ಸತ್ಯವನ್ನು ಮತ್ತಾಯ 24:36-44ರಲ್ಲಿ, ತಿಳಿಸಿ ಕರ್ತನು ಬರುವ ಸಮಯವನ್ನು "ಯಾರೂ ಅರಿತಿರುವದಿಲ್ಲ." ನಾವುಗಳು ಎಚ್ಚರದಿಂದ ಕಾದುಕೊಂಡಿರಬೇಕಷ್ಟೆ. ಅದು ನಮ್ಮ ಹೊಣೆಯಾಗಿದೆ. ಆದಕಾರಣ ನೀವು ಸಹ ಸಿದ್ಧರಾಗಿರ್ರಿ: "ನೀವು ನೆನಸದ ಗಳಿಗೆಯಲ್ಲಿ ಮನುಷ್ಯ ಕುಮಾರನು ಬರುತ್ತಾನೆ" (24:44). ಆತನು ಬರುವ ನಿರ್ದಿಷ್ಟವಾದ ಸಮಯವನ್ನು ಗುರುತಿಸುವದು ಅಸಾಧ್ಯ (ಅದನ್ನು ಮಾಡಲು ಯತ್ನಿಸಬಾರದು). ಆದರೆ ಸಿದ್ಧವಾಗಿರಲು ಸಾಧ್ಯತೆಗಳಿವೆ, ಅದು ನಮ್ಮ ಪ್ರತಿಯೊಬ್ಬರ ಹೊಣೆಯಾಗಿದೆ.

ಆದರೆ ಒಬ್ಬನು "ಎಲ್ಲವೂ ನಾಶವಾಗುವದಾದರೆ, ದೇವ ಜನರಿಗೆ ಇರುವ ಭವಿಷ್ಯ

ವಾದರೂ ಏನು?'' ಎಂದು ಕೇಳಬಹುದು. ಈ ಪ್ರಶ್ನೆಗೆ ಉತ್ತರ ನೀಡದೆ ಸತ್ಯವೇದವು ಅಂತ್ಯಗೊಳ್ಳುವದಿಲ್ಲ. ಪ್ರಕಟನೆ 21 ಮತ್ತು 22ರಲ್ಲಿ, ''ಅಂತಿಮವಾದ ಭವಿಷ್ಯದ'' ಬಗ್ಗೆ ಬರೆಯಲಾಗಿದೆ ಭವಿಷ್ಯದಲ್ಲಿ ಜರುಗುವ ಸಂಗತಿಗಳು ಮಾತ್ರವಲ್ಲದೆ, ಸಮಯವು ಅಂತ್ಯವಾಗುವಾಗ, ನಿತ್ಯತ್ವದಲ್ಲಿ ಜರುಗುವ ಸಂಗತಿಗಳನ್ನು ತಿಳಿಸಲಾಗಿದೆ. ಆ ಭವಿಷ್ಯವನ್ನು ಯೋಹಾನನು ವಿಧವಿಧವಾಗಿ ವಿವರಿಸಿದ್ದಾನೆ. ಅಲ್ಲಿ ಅವನು ನೂತನ ಭೂಮ್ಯಾಕಾಶಗಳ, ಹಾಗೂ ಮದಲಗಿತ್ತಿಯಾದ ನೂತನ ಯೆರೂಸಲೇಮಿನ ಹಾಗೂ ''ಪರಲೋಕದ'' ಪೂರ್ಣ ಚಿತ್ರಣವನ್ನು ನೀಡಲಾಗಿದೆ. ಸತ್ಯವೇದವು ಈ ವಿಧವಾಗಿ ಅಂತ್ಯಗೊಳ್ಳುವಲ್ಲಿ ಯಾವುದೇ ಆಶ್ಚರ್ಯವಿಲ್ಲ. ಪ್ರಚಲಿತವಾಗಿ ಅನೇಕ ಕಷ್ಟಗಳು ನಮಗಿರಬಹುದು, ಆದರೆ ಉಜ್ವಲವಾದ ಭವಿಷ್ಯವನ್ನು ದೇವರು ನಮಗಾಗಿ ಇಟ್ಟಿದ್ದಾರೆ. ಯಾವುದೇ ಕ್ರಯವನ್ನು ನೀಡಿ ಅಲ್ಲಿಗೆ ಸೇರುವ ಬಯಕೆ ನಮ್ಮದಾಗಿರುತ್ತದೆ.

## ''ಪರಲೋಕ'' ಅಂದರೇನು?

ಪರಲೋಕ ಎಂಬುದು ಒಂದು ''ನಿರ್ದಿಷ್ಟವಾದ'' ಸ್ಥಳವೇ ಅಥವಾ ಒಂದು ಮಾನಸಿಕ/ಆತ್ಮೀಕವಾದ ಭಾವನೆಯೇ? ಒಂದು ವೇಳೆ ಅದು ಸ್ಥಳವಾಗಿದ್ದರೆ, ಅದು ಇರುವ ಸ್ಥಳ ಯಾವದು? ಈ ಪ್ರಶ್ನೆಗಳಿಗೆ ಸರಳವಾದ ಉತ್ತರಗಳಿಲ್ಲ. (1) ನಿತ್ಯತ್ವದಲ್ಲಿ ಸಮಯ ಹಾಗೂ ಜಾಗ ಇರುವದಿಲ್ಲ, ಆದ್ದರಿಂದ ಅದರ ''ನಿರ್ದಿಷ್ಟವಾದ ಸ್ಥಳದ'' ಚರ್ಚೆ ಕಷ್ಟಕರ. (2) ಪರಲೋಕದ ಕುರಿತು ಹೊಸ ಒಡಂಬಡಿಕೆಯಲ್ಲಿ ಸಾಂಕೇತಿಕವಾಗಿ ಹೇಳಲಾಗಿದೆ. ನಾವು ಅರ್ಥಮಾಡಿಕೊಳ್ಳಲಾಗದ ಸಾಮರ್ಥ್ಯವನ್ನು ಹೊಂದಿರುವದರಿಂದ, ಹೇಗೆ ದೇವರು ಅದನ್ನು ನಮಗೆ ತಿಳಿಸಲು ಸಾಧ್ಯ? ಅದರ ತಾತ್ಪರ್ಯ ಸಾಂಕೇತಿಕವಾಗಿ ರುವದರಿಂದ, ಅಕ್ಷರಶಃ ಅದನ್ನು ಅರಿಯುವದು ಅಸಾಧ್ಯ.

ಪ್ರಕಟನೆ 21 ಹಾಗೂ 22ರಲ್ಲಿ, ಒಂದು ಸತ್ಯವನ್ನು ಸ್ಪಷ್ಟಪಡಿಸಲಾಗಿದೆ: ತಂದೆಯಾದ ದೇವರು ಹಾಗೂ ಕ್ರಿಸ್ತನು ಇರುವ ಪರಲೋಕಕ್ಕೆ ನಾವೆಲ್ಲರೂ ಹೋಗಬೇಕು. ಪ್ರಕಟನೆ 21:3ರಲ್ಲಿ ಸಿಂಹಾಸನದಿಂದ ಹೊರಟು ಬಂದ ಒಂದು ಮಹಾಶಬ್ಧದ ಕುರಿತು ಯೋಹಾನನು ತಿಳಿಸಿ, ''ಇಗೋ ದೇವರ ನಿವಾಸವು ಮನುಷ್ಯರಲ್ಲಿ ಅದೇ, ... ಆತನು ಅವರೊಡನೆ ವಾಸ ಮಾಡುವನು ಇದರ ನಿಮಿತ್ತ ಪರಲೋಕವು ವಿಸ್ಮಯವುಳ್ಳದ್ದಾಗಿದೆ'' ಅದೇನಂದರೆ ದೇವರ ಸನ್ನಿಧಿಯಲ್ಲಿರುವದೇ.

ಆ ಹೊಸ ಯೆರೂಸಲೋಮು ''ಪರಿಶುದ್ಧ ಪಟ್ಟಣವಾಗಿದ್ದರೂ'' ಅಲ್ಲಿ ಯಾವುದೇ ದೇವಾಲಯವಿರಲಿಲ್ಲ; ''ಯಾಕಂದರೆ ಸರ್ವಶಕ್ತನಾಗಿರುವ ಕರ್ತನೂ ಯಜ್ಞದ ಕುರಿಯಾದತನೂ ಅದರ ದೇವಾಲಯವಾಗಿದ್ದಾರೆ, ಪಟ್ಟಣಕ್ಕೆ ಸೂರ್ಯನಾಗಲೀ ಚಂದ್ರನಾಗಲೀ ಬೇಕಾಗಿಲ್ಲ. ಅದಕ್ಕೆ ದೇವರ ಪ್ರಭಾವವೇ ಬೆಳಕನ್ನು ನೀಡಿತು'' (21:22, 23). ನಂತರ 22:3-5ರಲ್ಲಿ, ಪರಿಶುದ್ಧ ಪಟ್ಟಣದಲ್ಲಿ ದೇವಜನರೇ ದೇವರಿಗೆ ಸೇವಕರಾಗಿರುವರು. ಅವರು ಆತನ ಮುಖವನ್ನು ನೋಡುವರು, ಆತನು ನಾಮಧೇಯವು ಅವರ ತಲೆಯ ಮೇಲಿ ರಿಸಿರುವದು (ಮಾಲಿಕತ್ವದ ಸೂಚನೆ) ಆತನು ಅವರ ಬೆಳಕಾಗಿರುವನು. ''ನಮಗಾಗಿ ಪ್ರಾಣ ನೀಡಿ ಕ್ರಿಸ್ತನ ಬಳಿ ಹಾಗೂ ದೇವರ ಸನ್ನಿಧಿಯಲ್ಲಿ ಇರುವದೇ ಪರಲೋಕವಾಗಿದೆ.''

ಯೋಹಾನ 14:1-3ರಲ್ಲಿ, ''ತಂದೆಯ ಮನೆಯನ್ನು'' ಪರಲೋಕ ಎಂದು ಯೇಸು ಕರೆದನು. ನಿತ್ಯವಾದ ಮನೆಯ ಕುರಿತು ಈ ವಿಧವಾಗಿ ಅರಿಯುವದು ಶ್ರೇಷ್ಟವಲ್ಲವೇ! ಆ ಮನೆಯಲ್ಲಿ ಯೇಸು ನಮಗಾಗಿ ಬಿಡಾರಗಳನ್ನು ಮಾಡಿರುವನಲ್ಲವೇ. ನಮ್ಮನ್ನು ಅಲ್ಲಿಗೆ ಒಯ್ಯಲು ಆತನು ಬರುವನಲ್ಲವೇ. ಮತ್ತಾಯ 8:11ರಲ್ಲಿ, ಪರಲೋಕದ ಜಾಣತನದ ಚಿತ್ರಣವಿದೆ. ಯುಗಗಳ ಹಿಂದೆ ನಂಬಿಕೆಯಲ್ಲಿದ್ದು ಮರಣ ಹೊಂದಿದವರ ಸಂಗಡ ಸೇರಿ ಊಟ ಮಾಡುವದು ಆಶೀರ್ವಾದವಲ್ಲವೇ. ಕರ್ತನ ಭೋಜನದ ಸಮಯದಲ್ಲಿ ಯೇಸು ಈ

ಪ್ರಸ್ತಾಪವನ್ನೇ ತನ್ನ ಶಿಷ್ಯರಿಗೆ ತಿಳಿಸಿದನು. "ನಾನು ನನ್ನ ತಂದೆ ರಾಜ್ಯದಲ್ಲಿ ದ್ರಾಕ್ಷಾರಸವನ್ನು ನಿಮ್ಮ ಸಂಗಡ ಹೊಸದಾಗಿ ಕುಡಿಯುವ ದಿನದವರೆಗೂ ಇನ್ನೂ ಕುಡಿಯುವದೇ ಇಲ್ಲ ಅಂದನು" (ಮತ್ತಾಯ 26:29). ಈ ಎರಡು ಚಿತ್ರಣಗಳಲ್ಲೂ ತಂದೆಯ ಮನೆಯಲ್ಲಿನ ಭೋಜನದಲ್ಲಿ ಅಂತ್ಯಗೊಳಿಸಲಾಗಿದೆ - ನಿತ್ಯವಾಗಿ ಇರುವಂಥ ಸುಂದರವಾದ ಚಿತ್ರಣವಾಗಿದೆ.

## ಪರಲೋಕವು ಹೇಗಿರುತ್ತದೆ?

ಪರಲೋಕದ ಕುರಿತ ಇನ್ನೊಂದು ಪ್ರಶ್ನೆ ಇದಾಗಿರುತ್ತದೆ. ಸತ್ಯವೇದದಲ್ಲಿ ಈ ಕುರಿತು ಪೂರ್ಣ ಅಧ್ಯಯನ ಮಾಡಿದ್ದಾಗ್ಯೂ, ಪರಲೋಕದ ಮಾಹಿತಿಯ ಕೊರತೆಯನ್ನು ಕಾಣುತ್ತೇವೆ. ನಾವು ಪರಸ್ಪರರನ್ನು ಅರ್ಥಮಾಡಿಕೊಳ್ಳಬಲ್ಲವೇ? ಈಗಿರುವಂತೆಯೇ, ಆಗಲೂ ಇರುವವೆ? ಈ ಕುರಿತು ಒಂದು ಸ್ವಾಭಾವಿಕವಾದ ಚಿಂತನೆಯು ನಮ್ಮಲ್ಲಿರುತ್ತದೆ. ಉತ್ತರವು ನಮಗೆ ದೊರಕದೆ ಇರಬಹುದು. ಪ್ರಕಟನೆ 21 ಹಾಗೂ 22ರಲ್ಲಿ, ಪರಲೋಕದಲ್ಲಿ ನಾವುಗಳು ಇರುವ ಆಕಾರವನ್ನು ವಿವರಿಸಲಾಗಿದೆ.

*ಈಗಿನ ಜೀವನಕ್ಕಿಂತಲೂ, ಪರಲೋಕದ ಜೀವಿತವು ವ್ಯತ್ಯಾಸವುಳ್ಳದ್ದಾಗಿರುತ್ತದೆ.* ಅದು ನೂತನ ಕ್ರಮವನ್ನು ಹೊಂದಿದ್ದು ಪ್ರಾಪಂಚಿಕ ನಿಯಮಗಳು ಅಲ್ಲಿ ಸಿಂದುವಾಗುವದಿಲ್ಲ. "ನೂತನ ಭೂಮ್ಯಾಕಾಶ" ಎಂಬ ದರ್ಶನವನ್ನು ಯೋಹಾನನು ವಿವರಿಸಿರುವನು (21:1). "ಹೊಸ" ಎಂಬುದಕ್ಕೆ ಗ್ರೀಕ್‌ನಲ್ಲಿ "ಕ್ರೋನಸ್" (ಕ್ರೊನೋಲಾಜಿಕಲ್) "ಸಮಯಕ್ಕೆ ಸಂಬಂಧಿಸಿದಂತೆ ನೂತನವಾದ ವಿಚಾರ" ಅದೇ ಸಂಗತಿಯ ನೂತನ ಆರಂಭ. "ಕೈನೋಸ್" ಎಂಬ ಇನ್ನೊಂದು ಪದ, ನೂತನವಾದ ಒಂದು ವಿಷಯ - ಹಳೇ ಸಂಗತಿಯ ಹೊಸ ವಿಚಾರವಲ್ಲ, ಅದು "ನೂತನಾಕಾಶ ಮಂಡಲ" ಅವರ ಕಣ್ಣೀರನ್ನೆಲ್ಲಾ ಒರಸಿಬಿಡುವನು, ಇನ್ನು ಮರಣವಿರುವದಿಲ್ಲ. ಇನ್ನು ದುಃಖವಾಗಲಿ ಗೋಳಾಟವಾಗಲಿ ಕಷ್ಟವಾಗಲಿ ಇರುವದಿಲ್ಲ. ಮೊದಲಿದ್ದದೆಲ್ಲಾ ಇಲ್ಲದೆ ಹೋಯಿತು (21:4). ಆ ಸ್ಥಿರತ್ವದಲ್ಲಿ ಈಗಿರುವ ಯಾವದೇ ಸಂಕಟಗಳು ಇರವದಿಲ್ಲ!

ನಾನು ಚಿಕ್ಕವನಾಗಿರುವಾಗ, ನನ್ನ ಅಜ್ಜಿಯು ಸತ್ಯವೇದವನ್ನು ಓದುವಾಗ ಆಕೆಯ ಕಾಲುಗಳ ಬಳಿಯಲ್ಲಿ ನಾನು ಆಟವಾಡುತ್ತಿದೆ. ಆ ಸಮಯದಲ್ಲಿ ಪ್ರಕಟನೆಯ ಈ ಭಾಗವನ್ನು ಆಕೆಯು ಓದುತ್ತಿದ್ದಳು ಎಂಬುದನ್ನು ನಾನು ಅರಿಯಲಿಲ್ಲ. ಆ ಸಮಯದಲ್ಲಿ ಆಕೆಯು ಕಣ್ಣೀರು ಸುರಿಸುವದನ್ನು ನಾನು ಕಂಡೆ. ನಾನು ಭಯಗೊಂಡು ಆಕೆಯ ಬಳಿಗೆ ಓಡಿಹೋಗಿ ಏನಾಯಿತು ಎಂದು ಕೇಳಲು, ಆಕೆಯು ಏನು ಸಂಭವಿಸಿಲ್ಲ ಅಂದಳು. ನಾನು ಈಗ ತಾನೇ ಪರಲೋಕದ ಕುರಿತು ಓದುತ್ತಿರುವೆನು ಅಲ್ಲಿಗೆ ಹೋಗುವದಕ್ಕೆ ನಾನು ತಡಮಾಡಲಾರೆನು ಅಂದಳು. ಅದರ ಅರ್ಥವನ್ನು ನಾನು ತಿಳಿಯಲಿಲ್ಲ, ಆದರೆ ಈಗ ನನಗೆ ಅರ್ಥವಾಗಿದೆ. ನನ್ನ ಅಜ್ಜಿ ಬಹಳ ಕಷ್ಟಗಳನ್ನು ಅನುಭವಿಸಿದ್ದಳು. ಆಕೆ ಚಿಕ್ಕ ಪ್ರಾಯದಲ್ಲಿಯೇ ವಿಧವೆಯಾಗಿದ್ದಳು, ಕಷ್ಟದ ಮಧ್ಯದಲ್ಲಿ ತನ್ನ ಮಕ್ಕಳನ್ನು ಸಾಕಿದ್ದಳು, ಮೂಲಭೂತ ಸೌಕರ್ಯಕ್ಕಾಗಿ ಆಕೆ ಬಹು ಕಷ್ಟಪಟ್ಟಿದ್ದಳು. ಮಾನಸಿಕ ತೊಂದರೆಗೊಳಗಾಗಿ ಆಕೆಯ ಮಗನು ಸತ್ತಿದ್ದನು. ಆದ್ದರಿಂದ ಆಕೆ ಪರಲೋಕಕ್ಕೆ ಹೋಗಲು ಆಸಕ್ತಳಾಗಿದ್ದಳು! ದೊಂಬಿ ಹಾಗೂ ಭಯವಿಲ್ಲದ ಸ್ಥಳದಲ್ಲಿ ಜೀವಿಸುವದು ಆನಂದವಲ್ಲವೇ. ಅಲ್ಲಿ ಹಸಿವೆ ಬಾಯಾರಿಕೆ ಇರುವದಿಲ್ಲ, ಖಾಯಿಲೆ ಇಲ್ಲ, ಪ್ರೀತಿ ಪಾತ್ರರನ್ನು ಕಳಕೊಳ್ಳುವದಿಲ್ಲ. ಹೃದಯದ ಅಥವಾ ದೇಹದ ವೇದನೆಗಳಿಲ್ಲ! ಈ ಲೋಕದ ಜೀವಿತಕ್ಕಿಂತಲೂ ಆ ಜೀವಿತ ವಿಭಿನ್ನವಾಗಿರುತ್ತದೆ!

*ಎರಡನೆಯದಾಗಿ, ಪರಲೋಕವು ಸುಂದರವಾಗಿರುತ್ತದೆ.* 21:9-11ರಲ್ಲಿ, ಪರಿಶುದ್ಧ ಪಟ್ಟಣವನ್ನು ಯೋಹಾನನು "ತೇಜಸ್ಸುಳ್ಳ ಪರಲೋಕ" ಎಂದಿರುವನು. ಅದು ಥಳಥಳಿಸುವ ವಜ್ರವೋ ಎಂಬಂತೆ ಕಾಣಿಸಿತು (ವಚನ 11). ನಂತರ ಅದು ಅಮೂಲ್ಯ ರತ್ನದ ಪ್ರಕಾಶಕ್ಕೆ

ಸಮಾನವಾಗಿತ್ತು (21:18-21). ಅದರ ಪ್ರಾಕಾರವು ಸೂರ್ಯಕಾಂತ ಶಿಲೆಯಿಂದ ಕಟ್ಟಲ್ಪಟ್ಟಿತು. ಪಟ್ಟಣವು ಶುದ್ಧಗಾಜಿನಂತೆ ಇರುವ ಸೋಸಿದ ಬಂಗಾರವೇ.

ಹೌದು ಅಕ್ಷರಶಃ ಪರಲೋಕ ಕುರಿತ ವಿವರಣೆಯಲ್ಲ, ಆದಾಗ್ಯೂ ಅದು ಅದ್ಭುತವಾದದ್ದೆ. ಈ ಭೂಲೋಕದ ಒಂದು ಸುಂದರ ತಾಣವನ್ನು ನೆನಪು ಮಾಡುವದಾದರೆ, ಪರಲೋಕಕ್ಕಿಂತ ಇದರ ಸೊಬಗು ಹೆಚ್ಚಾಗಿರುವದಿಲ್ಲ. ಆದರೆ ಅಲ್ಲಿ ಯಾರಿರುವರೆಂದು ತಿಳಿಯಬೇಕೇ ವಿನಃ ಅಲ್ಲಿ ಏನಿದೆ ಎಂಬುದಾಗಿರುವದಿಲ್ಲ. ಪರಲೋಕದಲ್ಲಿ ದೇವರ ಮಹಿಮೆಯಲ್ಲಿ ನಾವಿರುತ್ತೇವೆ. ಇದಕ್ಕಾಗಿ ಅನೇಕ ವಿಶ್ವಾಸಿಗಳು ಅನೇಕ ಶತಮಾನದಿಂದ ಕಾದಿರುವರು. ಕೀರ್ತನೆಗಾರನು ಹೇಳಿರುವಂತೆ,

> ನನ್ನ ಜೀವಮಾನದಲ್ಲೆಲ್ಲಾ ಯೆಹೋವನ ಮನೆ
> ಯಲ್ಲಿ ವಾಸಮಾಡುತ್ತಾ
> ಆತನ ಪ್ರಸನ್ನತೆಯನ್ನು ನೋಡುವದಕ್ಕೂ ಆತನ
> ಮಂದಿರದಲ್ಲಿ ಧ್ಯಾನಮಾಡುವದಕ್ಕೂ
> ನನಗೆ ಅಪ್ಪಣೆಯಾಗಬೇಕೆಂಬ ಒಂದೇ ವರವನ್ನು
> ಯೆಹೋವನಿಂದ ಕೇಳಿಕೊಂಡು ಅದನ್ನೇ ಎದುರು
> ನೋಡುತ್ತಿರುವೆನು (ಕೀರ್ತನೆ 27:4).

ದೇವರು "ಆತ್ಮ ಸ್ವರೂಪನಾಗಿರುವದರಿಂದ" (ಯೋಹಾನ 4:24), "ಆತನ ಸೌಂದರ್ಯ ಏನು ಎಂಬುದಾಗಿ" ಊಹಿಸಬಹುದು. ಆತನು "ಇರುವ ಹಾಗೆಯೇ" ನಾವುಗಳು ಆತನನ್ನು ಸಂಧಿಸುವೆವು ಎಂಬುದು ವಾಗ್ದಾನವಾಗಿರುತ್ತದೆ (1 ಯೋಹಾನ 3:2). ಆತನ ಸನ್ನಿಧಿಯು ಪರಲೋಕವನ್ನು ಅಲೌಕಿಕವಾದ ಸುಂದರ ತಾಣವನ್ನಾಗಿ ಮಾಡುತ್ತದೆ.

*ಮೂರನೆಯದಾಗಿ, ಪರಲೋಕವು ವಿಶಾಲವಾಗಿದೆ.* ಪ್ರಕಟನೆ 21:15-17ರಲ್ಲಿ, ದೇವದೂತನು ಚಿನ್ನದ ಅಳತೆಕೋಲನ್ನು ಹಿಡಿದು ಪರಲೋಕವನ್ನು ಅಳೆದನು ಯೋಹಾನನಿಗೆ ಅದರ ಅಳತೆಯನ್ನು ತಿಳಿಸುವದಕ್ಕಾಗಿ ಈ ಕಾರ್ಯ ನಡೆಯಿತು. ಮೊದಲನೆಯದಾಗಿ, ಆ ಪಟ್ಟಣವು ಚಚ್ಚೌಕವಾಗಿತ್ತು: "ಅದರ ನಾಲ್ಕು ಅಳತೆಗಳು ಸಮಾನಾಂತರ ... ಅಳತೆಯಲ್ಲಿರುತ್ತದೆ" (21:16) ಯೆರೂಸಲೇಮಿನ ದೇವಾಲಯದಲ್ಲಿ, ಅತಿಪರಿಶುದ್ಧವಾದ ಒಂದು ಸ್ಥಳವಿತ್ತು (1 ಅರಸು 6:20). ಅಲ್ಲಿ ದೇವರ ಮಂಜೂಷವಿತ್ತು - ಅದು ಸಹ ಚಚ್ಚೌಕ ವಾಗಿಯೇ ಇದ್ದು, ಹೊಸ ಒಡಂಬಡಿಕೆಯ ದೇವ ಸನ್ನಿಧಿಗೆ ಚಿಹ್ನೆಯಾಗಿದೆ.

ಯೋಹಾನನು ತಿಳಿಸಿದ ಚಚ್ಚೌಕವು "12,000 ಸ್ಟೇಡಿಯಾ" ಅಂದರೆ ಯೋಹಾನನು ನೋಡಿದ ಪಟ್ಟಣವು 1,400 ಮೈಲಿಗಳ ಉದ್ದವಾಗಿತ್ತು, ಅದರ ಸುತ್ತಳತೆಯು ಸಮನಾಗಿತ್ತು! ಅಳತೆಯ ಕುರಿತ ವಿಚಾರವು ಪ್ರಮುಖವೇ? ಹೌದು ಪರಲೋಕಕ್ಕೆ ಹೋಗುವವರಿಗೆಲ್ಲಾ ಸಾಕಾಗುವಷ್ಟು ಸ್ಥಳಾವಕಾಶವನ್ನು ಅಲ್ಲಿ ಕಲ್ಪಿಸಲಾಗಿದೆ. ಯೇಸು ಹೇಳಿದಂತೆ, "ನನ್ನ ತಂದೆಯ ಮನೆಯಲ್ಲಿ ಅನೇಕ ಬಿಡಾರಗಳಿವೆ" (ಯೋಹಾನ 14:2ಎ). ಪರಲೋಕಕ್ಕೆ ಕೆಲವೇ ಕೆಲವು ಜನರು ಪ್ರವೇಶ ಹೊಂದುವರೆಂಬುದು ಕೆಲವರ ಅಭಿಪ್ರಾಯವಿದೆ. ಲೂಕ 13:23ರಲ್ಲಿ, ಯೇಸುವನ್ನು ಸಂಧಿಸಿದ ಆ ಮನುಷ್ಯನು ಯೇಸುವಿಗೆ ಆಸಕ್ತಿಯಿಂದ ಪ್ರಶ್ನಿಸಿದನೇ ಹೊರತು ಪ್ರಾಯೋಗಿಕವಾದ ಯೋಚನೆಯಿಂದಲೇ: ಅವನು, "ಸ್ವಾಮೀ, ರಕ್ಷಣೆ ಹೊಂದುವವರು ಸ್ವಲ್ಪ ಜನರೋ?" ಎಂದು ಕೇಳಿದನು. ಆದ್ದರಿಂದ ಪರಲೋಕಕ್ಕೆ ಹೋಗುವವರು ಕೆಲವೇ ಜನರು ಎಂಬ ತರ್ಕವು ಯೆಹೂದ್ಯರಲ್ಲಿ ಉಂಟಾಯಿತು. ಯೇಸು ಅವನ ಪ್ರಶ್ನೆಗೆ ನೇರವಾದ ಉತ್ತರವನ್ನು ನೀಡಲಿಲ್ಲ, ಆದರೆ ಪ್ರಕಟನೆ 21, "ಇಲ್ಲ!" ಅನೇಕ ಜನರು ಅಲ್ಲಿ ಸೇರುವರು ಎಂಬ ಉತ್ತರವನ್ನು ನೀಡುತ್ತದೆ!

"ಆದರೆ" ಮತ್ತಾಯ 7:13, 14ರ ಕುರಿತಾಗಿ ಏನು? ಎಂಬ ಪ್ರಶ್ನೆಯನ್ನು ಒಬ್ಬನು

ಕೇಳಬಹುದು. "ಇಕ್ಕಟ್ಟಾದ ಬಾಗಲಿನಿಂದ ಒಳಕ್ಕೆ ಹೋಗಿರಿ. ನಾಶನಕ್ಕೆ ಹೋಗುವ ಬಾಗಲು ದೊಡ್ಡದು, ದಾರಿ ಅಗಲವು; ಅದರಲ್ಲಿ ಹೋಗುವವರು ಬಹು ಜನ. ನಿತ್ಯ ಜೀವಕ್ಕೆ ಹೋಗುವ ಬಾಗಲು ಇಕ್ಕಟ್ಟು, ದಾರಿ ಬಿಕ್ಕಟ್ಟು; ಅದನ್ನು ಕಂಡುಹಿಡಿಯುವವರು ಸ್ವಲ್ಪ ಜನ." ಕೆಲವೇ ಜನರು ಅಲ್ಲಿಗೆ ಸೇರುವರು ಎಂಬ ಅರ್ಥ ಇದರಲ್ಲಿ ಇರದೆ; ನಾಶವಾಗುತ್ತಿರುವವರಿಗೆ ಹೋಲಿಸಿದರೆ, ರಕ್ಷಿಸಲ್ಪಡುವವರು ಅಲ್ಪ ಜನರು ಎಂಬುದು ಅರ್ಥವಾಗಿದೆ. ಪ್ರಕಟನೆ 7:9, 10ರಲಿ,

> ಇವುಗಳಾದ ಮೇಲೆ ಇಗೋ, ಯಾರಿಂದಲೂ ಎಣಿಸಲಾಗದಂಥ ಮಹಾ ಸಮೂಹವು ಸಿಂಹಾಸನದ ಮುಂದೆಯೂ ಯಜ್ಞದ ಕುರಿಯಾದಾತನ ಮುಂದೆಯೂ ನಿಂತಿರುವದನ್ನು ಕಂಡೆನು. ಅವರು ಸಕಲ ಜನಾಂಗ ಕುಲ ಪ್ರಜೆಗಳವರೂ ಸಕಲಭಾಷೆಗಳನ್ನಾಡುವವರೂ ಆಗಿದ್ದರು. ಅವರು ಬಿಳೀ ನಿಲುವಂಗಿಗಳನ್ನು ತೊಟ್ಟುಕೊಂಡು ತಮ್ಮ ಕೈಗಳಲ್ಲಿ ಖರ್ಜೂರದ ಗರಿಗಳನ್ನು ಹಿಡಿದುಕೊಂಡಿದ್ದರು. ಅವರು-ಸಿಂಹಾಸನಾಸೀನನಾಗಿರುವ ನಮ್ಮ ದೇವರಿಗೂ ಯಜ್ಞದ ಕುರಿಯಾದಾತನಿಗೂ ನಮಗೆ ರಕ್ಷಣೆಯುಂಟಾದದ್ದಕ್ಕಾಗಿ ಸ್ತೋತ್ರ ಎಂದು ಮಹಾ ಶಬ್ದದಿಂದ ಕೂಗಿದರು.

ಸಕಲ ಯುಗಗಳಲ್ಲೂ ರಕ್ಷಿಸಲ್ಪಟ್ಟಿರುವವರ ಸಂಖ್ಯೆಯು ಇದಾಗಿರುತ್ತದೆ ಅದರಲ್ಲಿ ಸಕಲ ರಾಷ್ಟ್ರೀಯರು, ಭಾಷೆಯವರು, ಅಂದರೆ ದೇವರ ಕುರಿಮರಿಯ ರಕ್ತದಿಂದ ವಿಮೋಚನೆ ಹೊಂದಿದವರು ಇರುವರು. ಅವರೆಲ್ಲರಿಗೂ ಸ್ಥಳಾವಕಾಶ ಒದಗಿಸುವ ಪರಲೋಕವು ಬಹಳ ದೊಡ್ಡದ್ದಾಗಿರುತ್ತದೆ!

ವಾಸ್ತವವಾಗಿ, ಯೇಸು ನೇರವಾದ ಉತ್ತರವನ್ನು ನೀಡಲಿಲ್ಲ, ಪ್ರಶ್ನೆ ಕೇಳಿದವನು ಇನ್ನು ಅತೀ ಪ್ರಮುಖವಾದ ಸಂಗತಿಯನ್ನು ಯೇಸು ಕೇಳಬಯಸಿದನು: ಪರಲೋಕದಲ್ಲಿರುವ ಕೆಲವರಲ್ಲಿ ಅಥವಾ ಅನೇಕರಲ್ಲಿ ಇವನೂ ಒಬ್ಬನಾಗಿರುವನೇ? ಎಂಬ ತಾತ್ಪರ್ಯವು ಅಲ್ಲಿ ಅಡಗಿತ್ತು. "ಇಕ್ಕಟ್ಟಾದ ಬಾಗಿಲಿನಿಂದ ಒಳಕ್ಕೆ ಹೋಗಿರಿ. ಬಹುಜನ ಒಳಕ್ಕೆ ಹೋಗುವದಕ್ಕೆ ನೋಡುವರು ಆದರೆ ಅವರಿಂದಾಗುವದಿಲ್ಲ" (ಲೂಕ 13:24). ಅಂತ್ಯದಲ್ಲಿ ಎಷ್ಟು ಜನರು ಅಲ್ಲಿಗೆ ಹೋಗುವರು ಎಂಬುದಾಗಿರುವದಿಲ್ಲ. ಆದರೆ ನಾವುಗಳು ಅದರಲ್ಲಿ ಸೇರಿರುವೆವೇ ಎಂಬುದು ಪ್ರಮುಖ ಪ್ರಶ್ನೆಯಾಗಿದೆ. ನಂತರ ಅಲ್ಲಿ ಸಾಕಷ್ಟು ಸ್ಥಳವಿರುತ್ತದೆ ಎಂಬ ದೃಢ ನಿಶ್ಚಯವುಳ್ಳವರಾಗಿರಬಹುದು. "ಇಲ್ಲಿ ಸ್ಥಳವಾಕಾಶ" ಇರುವದಿಲ್ಲ ಎಂದು ಯಾರಿಗೂ ಹೇಳಲಾಗದು.

*ನಾಲ್ಕನೆಯದಾಗಿ, ಪರಲೋಕವು ಸುರಕ್ಷೆಯ ಸ್ಥಳವೆಂದು.* ಪ್ರಕಟನೆ 21ರಲ್ಲಿ, ಈ ಸುರಕ್ಷೆಯ ಸ್ಥಳದ ಬಗ್ಗೆ ವಿವರಣೆಯನ್ನು ನೀಡಲಾಗಿದೆ. ಉದಾಹರಣೆ ವಚನಗಳ 6 ಮತ್ತು 7ರಲ್ಲಿ, ಪರಲೋಕ ದಲ್ಲಿರುವವರಿಗೆ, ಆದಿಯು, ಅಂತ್ಯವು, ಪ್ರಾರಂಭವೂ ಸಮಾಪ್ತಿಯು, ದೇವರೇ ಆಗಿರುವನು. ಕ್ರಯವಿಲ್ಲದೆ ಅವರಿಗೆ ಜೀವಜಲವನ್ನು ನೀಡುವನು. ವಚನ 12ರಲ್ಲಿ ಸಂರಕ್ಷಣೆಯ ಕುರಿತು ಆ ಪಟ್ಟಣಕ್ಕೆ ಎತ್ತರವಾದ ದೊಡ್ಡ ಪ್ರಕಾರವಿತ್ತು, ವಚನ 17ರಲ್ಲಿ, ಅದು "144 ಮೊಳ" ದಪ್ಪವಿತ್ತು (ESV)! ಪುರಾತನ ಪಟ್ಟಣಗಳು ದೊಡ್ಡದಾದ ಗೋಡೆಗಳನ್ನು ಹೊಂದಿದ್ದವು. ಕಾಲಾಳುಗಳು ಎದುರುಬದುರಾಗಿ ಯುದ್ಧ ಮಾಡುವ ಕಾಲದಲ್ಲಿ ಗೋಡೆಯು ಮೊದಲ ಸುರಕ್ಷೆಯಾಗಿತ್ತು, ಇದರಿಂದ ಹೊರಗಿನವರು ಸರಾಗವಾಗಿ ಪಟ್ಟಣವನ್ನು ಪ್ರವೇಶಿಸಲು ಸಾಧ್ಯವಿರಲಿಲ್ಲ. ಅಪಾಯದ ಸಮಯದಲ್ಲಿ ಹಳ್ಳಿಗಾಡು ಪ್ರದೇಶಗಳವರು ಕೋಟೆಯೊಳಗೆ ಹೋದನಂತರ ಅದರ ಬಾಗಿಲನ್ನು ಮುಚ್ಚಲಾಗುತ್ತಿತ್ತು.

ಹೊಸ ಯೆರೂಸಲೇಮಿಗೂ ಸಹ ಗೋಡೆಗಳಿವೆ ಆದರೆ ಅದು ವಿಶೇಷವಾಗಿದೆ. ಅದಕ್ಕೆ 12 ಬಾಗಿಲುಗಳಿದ್ದರೂ, ಅವುಗಳನ್ನು ಮುಚ್ಚಿರುವದಿಲ್ಲ (ವಚನ 25). ಸಾಮಾನ್ಯವಾಗಿ ಹಗಲಿನಲ್ಲಿ ವಾಹನಗಳು ಒಳಬರುವಂತೆ, ಪಟ್ಟಣದ ಬಾಗಿಲುಗಳನ್ನು ತೆರೆದಿರುವರು. ರಾತ್ರಿ

ಸಮಯದಲ್ಲಿ, ಯಾರು ಒಳಬಾರದಂತೆ ಸುರಕ್ಷೆಗಾಗಿ ಸಿಪಾಯಿಗಳನ್ನು ನೇಮಿಸುತ್ತಿದ್ದರು ಇದಕ್ಕೆ ವ್ಯತಿರಿಕ್ತವಾಗಿ ಪರಲೋಕದ ಬಾಗಿಲುಗಳನ್ನು ಮುಚ್ಚುವದೇ ಇಲ್ಲ ಏಕೆಂದರೆ ಅಲ್ಲಿ ರಾತ್ರಿ ಇರುವದಿಲ್ಲ. ಏಕೆಂದರೆ? ಯಜ್ಞದ ಕುರಿಯಾದಾತನೇ ಅದರ ದೀಪವು (23, 24 ವಚನಗಳು). ಹೊಸ ಯೆರೂಸಲೇಮು ಪರಿಪೂರ್ಣ ಸುರಕ್ಷೆಯನ್ನು ಹೊಂದಿರುತ್ತದೆ.

ಈ ದಿನಗಳಲ್ಲಿ ಸಂರಕ್ಷಣೆಯನ್ನು ಎಲ್ಲರೂ ಬಯಸುತ್ತಾರೆ, ಏಕೆಂದರೆ ಭಯಾತ್ಪಾದನೆ ಹಾಗೂ ಅಪಾಯಗಳ ಪರಿಣಾಮಗಳು ಹೆಚ್ಚಾಗಿರುತ್ತದೆ. ವಿಮಾನ ನಿಲ್ದಾಣಗಳಲ್ಲಿ ಸುರಕ್ಷೆಯನ್ನು ಹಾಗೂ ತಮ್ಮ ಕೆಲಸದ, ಕ್ರೌರ್ಯದ ವಿಚಾರದಲ್ಲಿ ಸುರಕ್ಷೆಯನ್ನು ಬಯಸುತ್ತಾರೆ. ಸುರಕ್ಷೆಗಾಗಿ ಕೆಲವರು ಬಹಳಷ್ಟು ಹಣವನ್ನು ಕೊಡಿಡುತ್ತಾರೆ. ಆದಾಗ್ಯೂ ಸುರಕ್ಷೆಯ ಕೊರತೆ ಉಂಟಾಗುತ್ತದೆ. ಯೆರೂಸಲೇಮನ್ನು ತಲುಪುವವರೆಗೂ ನಮಗೆ ಸುರಕ್ಷೆಯು ಇರುವದಿಲ್ಲ. ದೊಡ್ಡ ಗೋಡೆಗಳಿರುವ ಪಟ್ಟಣದಲ್ಲಿ ನಾವುಗಳು ಇರುತ್ತೇವೆ. ಅದರ ಬಾಗಿಲುಗಳನ್ನು ಎಂದಿಗೂ ಮುಚ್ಚುವದಿಲ್ಲ. ದೇವರು ಹಾಗೂ ಯಜ್ಞದ ಕುರಿಯಾದ ಯೇಸುವು ನಮ್ಮ ಪಾಲನೆಯನ್ನು ಮಾಡುವರು. ಇದಕ್ಕಿಂತ ಹೆಚ್ಚಿನದನ್ನು ಯಾರು ಕೇಳಬಲ್ಲರು?

ಐದನೆಯದಾಗಿ ಪರಲೋಕವು ಪರಿಪೂರ್ಣವಾದದ್ದು, ಪ್ರಕಟನೆ 22:1-5ರಲ್ಲಿ, ಆ ಊಹೆಯ ಪರಲೋಕದಲ್ಲಿ ಸುಂದರವಾದ ತೋಟವಿದೆ, ಆದರೆ ಅದು ಸಾಧಾರಣವಾದ ತೋಟ ವಲ್ಲ. ಅಲ್ಲಿ ಜೀವವೃಕ್ಷವಿತ್ತು, ಆ ಮರದ ಎಲೆಗಳು ಜನಾಂಗದವರನ್ನು ವಾಸಿ ಮಾಡುವದಕ್ಕೆ ಪ್ರಯೋಜನವಾಗಿದೆ. ಅಲ್ಲಿ ಶಾಪಗ್ರಸ್ತವಾದದ್ದು ಒಂದೂ ಇರುವದಿಲ್ಲ. ಅಲ್ಲಿ ದೇವರ ಸಿಂಹಾಸನ ಹಾಗೂ ದೇವರ ಕುರಿಮರಿ ಯಾದಾತನು ಇರುವನು. ಅವರು ಯುಗ ಯುಗಾಂತರಗಳಲ್ಲೂ ಆಳುವರು (ವಚನಗಳು 3-5). ಇದರಲ್ಲಿ ವಿಶೇಷ ಇದೆಯೇ? ವಚನ 1 ರಿಂದ 5ರವರೆಗೆ ಆದಿಕಾಂಡ 3ರ "ಪಾಪದ" ವಿಚಾರವನ್ನು ದಾಖಲು ಮಾಡಲಾಗಿದೆ. ಆದಿಕಾಂಡ 3ರ ಏದೇನ್ ತೋಟದಲ್ಲಿ ಮನುಷ್ಯನು ದೇವರೊಂದಿಗಿನ ಸಂಬಂಧವನ್ನು ಸಂರಕ್ಷಣೆಯನ್ನು ಹಾಗೂ ಜೀವವೃಕ್ಷಕ್ಕೆ ಹೋಗುವ ಪ್ರವೇಶವನ್ನು ಕಳಕೊಂಡನು. ಸೈತಾನನಿಗೂ, ಆದಾಮನಿಗೂ, ಹವ್ವಳಿಗೂ ಹಾಗೂ ಭೂಮಿಗೂ ಶಾಪನೀಡಲಾಯಿತು. ಆದಿಕಾಂಡ 3ರಲ್ಲಿ "ಕಳಕೊಂಡ ಪರದೇಶವನ್ನು" ಹೊಸ ಯೆರೂಸಲೇಮಿನಲ್ಲಿ ಪುನಃ ಪಡಕೊಳ್ಳುವರು ಪ್ರಕಟನೆ 22.

## ಅಲ್ಲಿ ಇರುವವರು ಯಾರು?

ಈಗಾಗಲೇ ಪರಲೋಕದ ಕುರಿತ ವಿಶೇಷ ವಿವರಣೆಯನ್ನು ನೋಡಿರುವೆವು. ಆದ್ದರಿಂದ ಅಲ್ಲಿಗೆ ಹೋಗಲು ಯಾರೂ ಸಮರ್ಥರು? ಎಂಬ ಪ್ರಶ್ನೆಯನ್ನು ಕೇಳಬೇಕು ಆ ಹೊಸ ಯೆರೂಸಲೇಮಿನಲ್ಲಿ ಎಂದಿಗೂ ಮುರಿಯಲಾರದ ಅನ್ಯೋನ್ಯತೆಯನ್ನು ನಿತ್ಯನಿತ್ಯವಾಗಿ ಆನಂದಿಸಲು ಯಾರು ಯೋಗ್ಯರು ಎಂದು ಕೇಳಬೇಕು?

ಎಲ್ಲರೂ ಹೋಗಬಹುದು ಎಂಬುದೇ ಉತ್ತರವಾಗಿದೆ. ಆದರೂ ಸಕಲರೂ ಹೋಗುವದಿಲ್ಲ. "ಸಿದ್ಧರಾದ ಜನರಿಗೆ ಮಾತ್ರ ಪರಲೋಕವು ಸಿದ್ಧವಾಗಿರುತ್ತದೆ" ಎಂಬ ಒಂದು ಹೇಳಿಕೆಯಿದೆ. ಅಂದರೆ ಆಕಸ್ಮಾತ್ತಾಗಿಯಾದರೂ ಪರಲೋಕಕ್ಕೆ ಹೋಗುವದಿಲ್ಲ ಆ ಲೋಕಕ್ಕೆ ಮುಖಮಾಡಿ, ಯಾವ ಅಭ್ಯಾಂತರವು ಇಲ್ಲದಂತೆ ಅದಕ್ಕಾಗಿ ತವಕ ಪಡುವವರು ಮಾತ್ರ ಯೋಗ್ಯರಾಗಿರುವರು. ಅದು ಅವರ ಗುರಿಯಾಗಿರಬೇಕು. "ನಾವುಗಳು" ಸಿದ್ಧಗೊಳ್ಳುವದು ಹೇಗೆ? ಯೇಸುವನ್ನು ಅನುಸರಿಸಿ, ದೇವಕುರಿಮರಿಯನ್ನು ಹಿಂಬಾಲಿಸುವದರಿಂದ ಮಾತ್ರ.

ಪರಲೋಕವು ಅಸ್ತಿತ್ವದಲ್ಲಿರುವಂತೆ ನರಕವೂ ಸಹ ಅಸ್ತಿತ್ವದಲ್ಲಿರುತ್ತದೆ. ಕಡೇಯ ಎರಡು ಅಧ್ಯಾಯಗಳಲ್ಲಿ ಯೋಹಾನನು ಈ ಕುರಿತು ವಿವರಿಸಿರುವದಿಲ್ಲ. ಅದಾಗ್ಯೂ ನರಕದ ಕುರಿತು ಅನೇಕ ಬಾರಿ ಹೇಳಿರುವನು. ಕ್ರೈಸ್ತತ್ವವು "ಸಾರ್ವತ್ರಿಕ ಧರ್ಮವಲ್ಲ"; ಎಲ್ಲರಿಗೂ ರಕ್ಷಣೆಯಾಗುವದು ಎಂದು ಸತ್ಯವೇದವು ತಿಳಿಸುವದಿಲ್ಲ. ಪ್ರಕಟನೆಯಲ್ಲೂ ಹಾಗೂ ಹೊಸ ಒಡಂಬಡಿಕೆಯ ಉಳಿದ ಭಾಗಗಳಲ್ಲೂ ಇರುವ ಬೋಧನೆ ಏನೆಂದರೆ, ಯೇಸು

ನೀಡಿರುವದನ್ನು ನಿರಾಕರಿಸುವವನು ನಿತ್ಯವಾದ ನರಕಕ್ಕೆ ತುತ್ತಾಗುವನು ಎಂಬದೆ. ಆದ್ದರಿಂದ ಯೋಹಾನನು ಬರೆದು,

> ಆದರೆ ಹೇಡಿಗಳು, ನಂಬಿಕೆಯಿಲ್ಲದವರು, ಅಸಹ್ಯವಾದದ್ದರಲ್ಲಿ ಸೇರಿದವರು, ಕೊಲೆಗಾರರು, ಜಾರರು, ಮಾಟಗಾರು, ವಿಗ್ರಹಾರಾಧಕರು, ಎಲ್ಲಾ ಸುಳ್ಳುಗಾರರು ಇವರಿಗೆ ಸಿಕ್ಕುವ ಪಾಲು ಬೆಂಕಿ ಗಂಧಕಗಳುರಿಯುವ ಕೆರೆಯೇ; ಅದು ಎರಡನೆಯ ಮರಣವು ಎಂದು ನನಗೆ ಹೇಳಿದನು (ಪ್ರಕಟನೆ 21:8).

> ಜನಾಂಗಗಳ ವೈಭವವೂ ಘನವೂ ಅಲ್ಲಿಗೆ ಬರುವವು. ಅದರಲ್ಲಿ ಹೊಲೆಯಾದದ್ದೊಂದು ಸೇರುವದಿಲ್ಲ, ಅಸಹ್ಯವಾದದ್ದನ್ನೂ ಸುಳ್ಳಾದದ್ದನ್ನೂ ನಡಿಸುವವನು ಸೇರುವದಿಲ್ಲ; ಯಜ್ಞದ ಕುರಿಯಾದಾತನ ಜೀವಬಾಧ್ಯರ ಪಟ್ಟಿಯಲ್ಲಿ ಯಾರಾರ ಹೆಸರುಗಳು ಬರೆದವೆಯೋ ಅವರು ಮಾತ್ರ ಸೇರುವರು (ಪ್ರಕಟನೆ 21:27).

> ತಮ್ಮ ನಿಲುವಂಗಿಗಳನ್ನು ತೊಳಕೊಂಡವರು ಧನ್ಯರು; ಅವರಿಗೆ ಜೀವವೃಕ್ಷದ ಹಕ್ಕು ಇರುವದು; ಅವರು ಬಾಗಿಲುಗಳಿಂದ ಆ ಪಟ್ಟಣದೊಳಕ್ಕೆ ಸೇರುವರು. ನಾಯಿಗಳಂತಿರುವವರೂ ಮಾಟಗಾರರೂ ಜಾರರೂ ಕೊಲೆಗಾರರೂ ವಿಗ್ರಹಾರಾಧಕರೂ ಸುಳ್ಳಾದದ್ದನ್ನು ಪ್ರೀತಿಸಿ ನಡಿಸುವವರೆಲ್ಲರೂ ಹೊರಗಿರುವರು ಎಂದು ಹೇಳಿದನು (22:14, 15).

> ಈ ಪುಸ್ತಕದ ಪ್ರವಾದನಾವಾಕ್ಯಗಳನ್ನು ಕೇಳುವ ಪ್ರತಿಯೊಬ್ಬನಿಗೆ ನಾನು ಹೇಳುವ ಸಾಕ್ಷಿ ಏನಂದರೆ - ಇವುಗಳಿಗೆ ಯಾವನಾದರೂ ಹೆಚ್ಚು ಮಾತುಗಳನ್ನು ತಂದುಹಾಕಿದರೆ ದೇವರು ಅವನ ಮೇಲೆ ಈ ಪುಸ್ತಕದಲ್ಲಿ ಬರೆದಿರುವ ಉಪದ್ರವಗಳನ್ನು ತಂದುಹಾಕುವನು. ಯಾವನಾದರೂ ಈ ಪ್ರವಾದನಾ ಪುಸ್ತಕದಲ್ಲಿರುವ ಮಾತುಗಳಲ್ಲಿ ಒಂದನ್ನಾದರೂ ತೆಗೆದುಬಿಟ್ಟರೆ ಈ ಪುಸ್ತಕದಲ್ಲಿ ಬರೆದಿರುವ ಪರಿಶುದ್ಧ ಪಟ್ಟಣದಲ್ಲಿಯೂ ಜೀವವೃಕ್ಷದಲ್ಲಿಯೂ ಅವನಿಗಿರುವ ಪಾಲನ್ನು ದೇವರು ತೆಗೆದುಬಿಡುವನು (22:18, 19).

ಪರಲೋಕದಲ್ಲಿ ಇರಲಾರದ ಜನರ ಉದಾಹರಣೆಗಳನ್ನು ಈ ಮೇಲಿನ ವಾಕ್ಯವು ನೀಡುತ್ತದೆ. ಪಾಪದಲ್ಲಿ ಜೀವಿಸುತ್ತಿರುವವರಿಗೆ ಎಚ್ಚರಿಕೆಯ ಮಾತಾಗಿಯೂ, ದೇವ ಕುರಿಮರಿಯನ್ನು ಹಿಂಬಾಲಿಸುವವರಿಗೆ ಉತ್ತೇಜನವನ್ನು ನೀಡುತ್ತದೆ. ಪರಲೋಕವು ಪಾಪ ರಹಿತವಾದ ಲೋಕವಾಗಿದೆ.

ಪ್ರತಿಯೊಬ್ಬನಿಗೂ ಆಯ್ಕೆಯ ಅವಕಾಶವಿರುತ್ತದೆ. ಕ್ರಿಸ್ತನಿಗೆ ಒಳಪಟ್ಟು ಪರಲೋಕದ ಆಶೀರ್ವಾದವನ್ನು ಪಡೆಯಬಹುದು ಅಥವಾ ಆತನ ಯಜ್ಞವನ್ನು ನಿರಾಕರಿಸಿ ಆತನಿಂದ ನಿತ್ಯವಾಗಿ ಪ್ರತ್ಯೇಕವಾಗಬಹುದು.

"ಆತ್ಮನೂ ಮದಲಗಿತ್ತಿಯೂ - ಬಾ ಅನ್ನುತ್ತಾರೆ ಕೇಳುವವನು ಬಾ ಅನ್ನಲಿ ಬಾಯಾರಿದವನು ಬರಲಿ ಇಷ್ಟವುಳ್ಳವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ" (22:17). ನಿತ್ಯತ್ವಕ್ಕಾಗಿ ದೇವರು ಒಂದು ತೆರೆದ ಆಹ್ವಾನವನ್ನು ನೀಡಿರುವನು, ಅದರ ಆಯ್ಕೆಯನ್ನು ನಾವುಗಳೇ ಮಾಡಬೇಕು. ಅದಕ್ಕಾಗಿ ಯಾವ ಕ್ರಯವನ್ನಾದರೂ ನೀಡಿ ಹೊಂದಿಕೊಳ್ಳಬೇಕು, ಏಕೆಂದರೆ ಅದು ವಾಗ್ದಾನವಾಗಿದೆ.

---

## ಅಂತ್ಯದ ಸಮಯವನ್ನು ನಾವುಗಳು ಮುಂತಿಳಿಸಬಹುದೇ?

ಸತ್ಯವೇದದ ವಿದ್ಯಾರ್ಥಿಗಳು ಮತ್ತಾಯ 24ನ್ನು ಮತ್ತು ಅದಕ್ಕೆ ಸಂಬಂಧ ಪಟ್ಟ (ಮಾರ್ಕ

13; ಲೂಕ 21) ಓದಿದ ನಂತರ, ಅಂತ್ಯದ "ಸಂಕೇತಗಳನ್ನು" ಯೇಸು ತಿಳಿಸಿರುವನು ಎಂದು ಹೇಳಬಹುದು (ಮತ್ತಾಯ 24ನ್ನು "ಯುಗಾಂತ್ಯದ ಚಿಹ್ನೆಗಳು" ಎಂದು ಬರೆಯಲಾಗಿದೆ). ಆದರೆ ಯಾರೂ ಸಹ ಯುಗಾಂತ್ಯದ ಸಮಯವನ್ನು ಹೇಳ ಲಾರರು ಎಂದು ಯೇಸು ಸ್ಪಷ್ಟ ಪಡಿಸಿರುವನು (ಮತ್ತಾಯ 24:36), ಇದು ಸಹಜವಾಗಿ ಅಪಾರ್ಥಕ್ಕೂ ಒಳಾಗಿದೆ. ಆದರೆ ಅದು ಆ ಅದ್ಯಾಯದ ಪ್ರಮುಖ ಅಂಶವಲ್ಲ.

ಮತ್ತಾಯ 24ರಲ್ಲಿ ಶಿಷ್ಯನು ಕೇಳಿದ ದೇವಾಲಯದ ನಾಶನದ ಪ್ರಶ್ನೆಗೆ ಯೇಸು ಉತ್ತರ ನೀಡಿದನು. ನಂತರದಲ್ಲಿ ಅವರು "ನೀನು ಪ್ರತ್ಯಕ್ಷನಾಗುವದಕ್ಕೂ ಯುಗದ ಸಮಾಪ್ತಿಗೂ ಸೂಚನೆಯೇನು? ಹೇಳು ಅಂದರು (ವಚನ 3). ಎರಡು ವಿವಿಧ ಪ್ರಶ್ನೆಗಳಿಗೆ ಉತ್ತರ ನೀಡಲಾಯಿತು. ಇದಲ್ಲದೆ ಯುದ್ಧಗಳು ಎಂಬ ಸುದ್ಧಿಯನ್ನು ಜನರು ತರುವರು, ಆತನ ಬರುತ್ತಾನೆ ಎಂಬ ಸಂಕೇತವನ್ನು ನೀಡುವವರ ಕುರಿತು ಎಚ್ಚವಾಗಿರ್ರಿ ಅಂದನು (ವಚನ 6). ಬರಗಳುಹಾಗೂ ಭೂಕಂಪಗಳು ಆಗುವವು ಎನ್ನುವರು. ಅದು ಅಂತ್ಯದ ಸೂಚನೆಯಲ್ಲ (ವಚನಗಳು 7, 6). ಅದು ಪ್ರಸವ ವೇದನೆಯ ಆರಂಭ (ವಚನ 8). ವಚನ 15 ರಿಂದ 28ರಲ್ಲಿ ಯೆರೂಸಲೇಮಿನ ನಾಶನದ ಸೂಚನೆಯಿದ್ದರೂ, ಈ ವಿಚರಗಳ ಕುರಿತು ಯಾರು ಮುಂತಿಳಿಸಬಾರದು ಎಂದು ಯೇಸು ತಿಳಿಸಿರುವನು.

ವಚನ 29ರಲ್ಲಿ ಯೆರೂಸಲೇಮಿನ ನಾಶನದ ನಂತರ, ಅಂತ್ಯವು ಉಂಟಾಗುವದು ಎಂದಿದ್ದರು, ಆ ಸಮಯದ ಕುರಿತು ತಂದೆಯನ್ನು ಹೊರತುಪಡಿಸಿ ತನಗಾಗಲೀ ಅಥವಾ ದೇವದೂತರಿಗಾಗಲೀ ತಿಳಿದಿರುವದ್ಲಿ ಅಂದನು. ಸಮಯವನ್ನು ಅರಿಯುವದು ಪ್ರಮುಖವಾ ಗಿರದೆ, ದೇವಭಕ್ತಿಯ ಜೀವನವನ್ನು ಜೀವಿಸಬೇಕಷ್ಟೆ (24:44-25, 46), ಇದೇ ರೀತಿಯಲ್ಲಿ ಒತ್ತಿ ಹೇಳಲಾಗಿದೆ 1 ಥೆಸಲೋನಿಕ 5:1-11.

---

## ಸತ್ತವರು ಎಲ್ಲಿರುವರು?

ನಾವು ಸತ್ತಮೇಲೆ ಏನಾಗುವೆವು? ಎಂಬುದು ಪ್ರಮುಖ ಪ್ರಶ್ನೆಯಾಗಿದೆ (ದೇವರ ನಂಬಿಗಸ್ತ ಮಕ್ಕಳಾದವರು), ಸತ್ತ ತಕ್ಷಣ ಪರಲೋಕಕ್ಕೆ ಹೋಗುವೆವು ಅಥವಾ ಒಂದು ತಟಸ್ಥ ಸ್ಥಳದಲ್ಲಿ ಇರುವೆವು. ಪುನರುತ್ಥಾನದವರೆಗೆ ಎಲ್ಲಿ ಇರುವೆವು? ಪರಲೋಕದ ಸಂಗತಿಯು ಸಾಂಕೇತಿಕವಾಗಿರುವದರಿಂದ, ಈ ಪ್ರಶ್ನೆಯನ್ನು ಉತ್ತರಿಸುವದು ಕಷ್ಟಕರವೇ.

ನಾವು ನೇರವಾಗಿ ಪರಲೋಕಕ್ಕೆ ಹೋಗುವೆವು ಎಂಬ ಸಾಂಕೇತಿಕ ವಾಕ್ಯ ಒಂದಿದೆ. ಪೌಲನು ಫಿಲಿಪ್ಪಿಯವರಿಗೆ ಬರೆಯುವಾಗ, ದೇಹ ಮತ್ತು ಆತ್ಮದ ನಡುವಿನ ವಿಚಾರದಲ್ಲಿ ದೇಹದಲ್ಲಿದ್ದು ಸೇವೆ ಮಾಡಲೇ ಅಥವಾ ನಿತ್ಯತ್ವಕ್ಕೆ ಹೋಗಲೇ ಎಂದು ಹೇಳಿದನು ಇಲ್ಲಿಂದ ಹೋಗಿ ಕ್ರಿಸ್ತನ ಬಳಿ ಇರುವದೇ ಉತ್ತಮ ಅಂದನು (ಫಿಲಿಪ್ಪಿ 1:23). ಮರಣದ ನಂತರ ನೇರವಾಗಿ "ದೇವರ ಸನ್ನಿಧಿಗೆ ಹೋಗುವರು" ಎಂದು ಪೌಲನು ತಿಳಿಸಿರುವನು ಅಂದರೆ ಅದು ಕ್ರಿಸ್ತನು ಇರುವ ಸ್ಥಳವೇ.

"ನೆನಪು ಮಾಡಿಕೋ" ಎಂಬ ಕಳ್ಳನ ಮಾತಿನಂತೆ ಪೌಲನ ಹೇಳಿಕೆಯು ಇರುತ್ತದೆ. ಯೇಸು "ಈ ಹೊತ್ತೇ ನನ್ನ ಸಂಗಡ ಪರದೈಸಿನಲ್ಲಿರುವೆ" ಅಂದನು (ಲೂಕ 23:42, 43). ಪುನಃ ನಿತ್ಯವಾದ ದೇವರ ಸನ್ನಿಧಿ ಎಂದು ನೋಡುತ್ತೇವೆ. ಅದು ಸೃಷ್ಟಿಕರ್ತನ ಹಾಗೂ ನಮ್ಮ ರಕ್ಷಕನ ವಿಶೇಷ ಸನ್ನಿಧಿಯಾಗಿದೆ. ಆತನೊಂದಿಗಿರುವದೇ ಉತ್ತಮವಾಗಿದೆ.